ಇದು ಸಿ.ಕೆ.ಸಿ.ದು ಅಂತ ಹೇಳಿದೀನಿ. ಆ ಥರ ಸುಳ್ಳು ಹೇಳ್ತಾ ಹೇಳ್ತಾ ನಂಗೆ ಅದೇ ಸತ್ಯ ಅನ್ನಿಸೋಕೆ ಶುರು ಆಗಿದೆ' ಅಂದಳು. ನಾನು ನಕ್ಕು ಸುಮ್ಮನಾಗಿಬಿಟ್ಟೆ. ಇನ್ನೊಂದು ದಿನ ಅವಳು ಕಡಗ ಧರಿಸಿ ಬಂದಾಗ, 'ರಮ್ಯಾ, ಇಂಥ ಕಡಗಾನ ನೀನು ಸಿ.ಕೆ.ಸೀಲಿ ನೋಡಿದ್ದೆಯಲ್ವ? ಪ್ರಿಯಾಗೆ ರಿಂಗ್ ತಗೋಳೋಕೆ ಹೋದಾಗ... ನೀನೀಥರದ್ದು ವಿಚಾರಿಸಿರಲಿಲ್ವ?' ಅಂದೆ ಹಳೆಯ ನೆನಪಿನಿಂದ. ಅವಳದಕ್ಕೆ 'ಹೂಂ... ನೋಡಿರಬಹುದು. ಹೆಂಗಸರಿಗೆ ಎಲ್ಲಿ ಹೋದ್ರು ಒಡವೆ ಹುಚ್ಚು ಇದ್ದಿದ್ದೇ ತಾನೆ. ಇಷ್ಟಕ್ಕೂ ಅದೆಲ್ಲ ಯಾರಿಗೆ ನೆನಪಿರುತ್ತೆ ಹೇಳಿ?' ಅಂದಳು. ಎಲ್ಲೋ ಏನೊ ತಾಳೆಯಾಗುತ್ತಿಲ್ಲವೆನ್ನಿಸಿತು. ಏನೆಂದು ಗೊತ್ತಾಗಲಿಲ್ಲ. ಮೊದಲೇ ಚೆಲುವೆ, ಇಂಥ ಆಭರಣಗಳ ಅಲಂಕಾರದಿಂದ ಇನ್ನೂ ಹತ್ತುಪಟ್ಟು ಚೆನ್ನಾಗಿ ಕಾಣಿಸುತ್ತಿದ್ದಳು. ಎಲ್ಲವೂ ಚೆನ್ನಾಗಿತ್ತು.

ಇದೊಂದಾಗದೇ ಇದ್ದರೆ...

ಪುಟ್ಟಿ ದೊಡ್ಡವಳಾಗುತ್ತಾ ಆಗುತ್ತಾ ರಮ್ಯಳ ಒಡವೆಯ ಹಂಬಲವೂ ದೊಡ್ಡದೇ ಆಗುತ್ತಿತ್ತು. ಈಗವಳ ಸಂಬಳವೂ ಜಾಸ್ತಿಯಾಗಿತ್ತು. ಪ್ರತಿತಿಂಗಳು ಒಡವೆ ಅಂಗಡಿಯ ಓಡಾಟ ಮಾತ್ರ ತಪ್ಪಿಸುತ್ತಿರಲಿಲ್ಲ. ಅವಳ ಒಡವೆಯ ಹಂಬಲ ಕಂಡಾಗಲೆಲ್ಲ ನನ್ನೊಳಗೊಂದು ಅಪರಾಧಿಪ್ರಜ್ಞೆ ಕಾಡುತ್ತಿತ್ತು. ಅವಳದಷ್ಟು ವ್ಯಾಮೋಹಿಸುವ ಚಿನ್ನಾಭರಣಗಳನ್ನು ನಾನು ಯಾವತ್ತೂ ಕೊಡಿಸಲಾಗಿಲ್ಲವೆಂದು! ಚಿಕ್ಕಪುಟ್ಟ ಉಂಗುರ ಓಲೆಗಳಿಗೆ ನನ್ನ ತಖ್ತೆ ಮುಗಿದುಹೋಗುತ್ತಿತ್ತು. ಅವಳು ಹೇಗೋ ಪಾಪ, ತಾನು ದುಡಿದು ಮಾಡಿಸಿಕೊಂಡ ಒಡವೆಗಳಿವು. ಅಷ್ಟಾದರೂ ಆಯಿತಲ್ಲ ಅನ್ನಿಸುತ್ತಿತ್ತು. ಆದರೂ ಅವಳ ಹುಚ್ಚು ಮೋಹಕ್ಕೆ ಒಮ್ಮೊಮ್ಮೆ ಕೋಪವೂ ಬರುತ್ತಿತ್ತು. ಒಮ್ಮೆ ಚಿನ್ನದಂಗಡಿಗೆ ಹೋದಾಗ, ಅಲ್ಲಿಯ ಕಣ್ಣುಕುಕ್ಕುವ ಆಭರಣಗಳನ್ನು ನೋಡಿ ನನ್ನ ಕಿವಿಯಲ್ಲಿ ಉಸುರಿದ್ದಳು... ಈಗಲೂ ನೆನೆದರೆ ಮೈಜುಮ್ ಎನ್ನುತ್ತದೆ. 'ಈ ಹಾಳು ಸಿ.ಸಿ.ಟೀವಿಗಳಿಲ್ಲದೆ ಹೋಗಿದ್ದರೆ... ಅಲ್ಲಿರುವ ಹಾರಗಳಲ್ಲಿ ಒಂದನ್ನಾದರೂ ಹಾರಿಸಿಬಿಡುತ್ತಿದ್ದೆ. ಕಡೆಯ ಪಕ್ಷ ಆ ಚಾಂದ್ಬಾಲಿಯನ್ನಾದರೂ...' ಅಂದಾಗ ನನ್ನೊಳಗೆ ಎದ್ದ ತಳಮಳದ ಅಲೆಗಳನ್ನು ಹತ್ತಿಕ್ಕಲಾರದೆ ಅಲ್ಲಿಂದ ಹೊರ ಬಂದು ಗಾಳಿಗೆ ಮುಖಮಾಡಿದ್ದೆ. ವಾಸ್ತವವಾಗಿ ಅವಳಂತಹ ಚಂದನದ ಗೊಂಬೆಗೆ ಚಂದ ಕಾಣಲು ಯಾವ ಒಡವೆಗಳೂ ಬೇಕಿರಲಿಲ್ಲ. ಅವಳದನ್ನು ತೊಟ್ಟರೆ ಅಪ್ಸರೆಯ ಹಾಗೆ ಕಾಣಿಸುತ್ತಿದ್ದಳು. ಆಭರಣಗಳ ಹೊಳಪಲ್ಲಿ ಅವಳ ಮುಖದ ಮಿಂಚು ನೂರ್ಮಡಿಯಾಗುತ್ತಿತ್ತು. ಸೂರ್ಯನ ಎರವಲು ಬೆಳಕಿಂದ ಬೆಳಗುವ ಚಂದ್ರನಂತೆ! ಆಭರಣಗಳನ್ನು ಧರಿಸುವುದರಲ್ಲಿ ಅದೆಷ್ಟು ಆಸಕ್ತಿ ಆಸ್ಥೆಯೆಂದರೆ, ಇಷ್ಟೂ ಬೇಸರವಿಲ್ಲದೆ ನಿತ್ಯವೂ ಬದಲಿಸುತ್ತಿದ್ದಳು. ಸಮಾರಂಭಗಳಿಗಂತೂ ಮುತುವರ್ಜಿಯಿಂದ ಆಭೂಷಣ ಸಮೇತ ಅಲಂಕರಿಸಿಕೊಳ್ಳುತ್ತಿದ್ದಳು. ಒಮ್ಮೊಮ್ಮೆ ಅನುಮಾನ ಕಾಡುತ್ತಿದ್ದವು. ಆಭರಣಗಳಿಲ್ಲದಿದ್ದರೆ ಅವಳ ಕಂಗಳ ಕಾಂತಿ, ಮುಖದ ಚೆಲುವು ಕಡಿಮೆಯಾಗುತ್ತದೆಂದು. ಅವಳ ಕತ್ತು ಕಿವಿ ಕೈಗಳಲ್ಲಿನ ಅಮೂಲ್ಯ ಹರಳುಗಳ ಥಳಥಳ ಮಿರುಗಿನಲ್ಲಿ ಅವಳ ಕಣ್ಣು ಮುಖಗಳು ತೇಜಃಪುಂಜವಾಗಿ ಶೋಭಿಸುತ್ತಿದ್ದವು. ಅವಿಲ್ಲದಿದ್ದರೆ ಅವಳು ನಿಸ್ತೇಜವಾಗಿ ಕಾಣುತ್ತಾಳೆ ಎಂದು ಅನ್ನಿಸ ಹತ್ತಿತು. ಎಲ್ಲವೂ ಸರಿಯಿತ್ತು.

ಇದೊಂದಾಗದೆ ಇದ್ದಿದ್ದರೆ...

ಐದು ವರ್ಷಗಳ ಹಿಂದೆ ನನ್ನ ಮಾವನ ಮಗ ಸುರೇಶ ಫೋನ್ ಮಾಡಿದ್ದ. 'ಏನೋ ಹೆಂಗಿದೀಯ? ಇವತ್ತು ಬ್ಲೂಬೆರಿ ಹೋಟೆಲ್‌ನ ಲೌಂಜ್‌ನಲ್ಲಿ ನಿನ್ನ ಹೆಂಡತೀನ ಕಂಡಂಗಾಯ್ತು. ಮಾತಾಡಿಸಣ ಅಂತ ಹೋದೆ, ಅಷ್ಟರಲ್ಲಿ ಪಾಸಾಗಿಬಿಟ್ಟಳು. ನೀನಿರಲಿಲ್ಲ, ಒಬ್ಬಳೇ ಕಂಡಳು. ಅದನ್ನೇ ಹೇಳಣಾಂತ ಮಾಡಿದೆ' ಅಂದ. 'ಹೌದ? ಅವಳ ಆಫೀಸಿನ ಪಾರ್ಟಿ ಇರಬೇಕು. ನಂಗೊತ್ತಿಲ್ಲ' ಅಂದೆ. ಅಲ್ಲೇ ನಿಂತಿದ್ದಳು. ನನ್ನ ಮಾತನ್ನೇ ತದೇಕವಾಗಿ ಗಮನಿಸುತ್ತಿದ್ದಳು. ಫೋನ್ ಇಟ್ಟಮೇಲೆ, 'ಅದೇನು?